ಶ್ರೀ ಬಿ.ಹೆಚ್.ಬನ್ನಿಕೋಡ್:- ನೀವು ಈ ರೀತಿ ಹೇಳುವಾಗ ನಾವು ಇಂಟರ್‌ಫಿಯರ್ ಆಗಬೇಕಾಗುತ್ತದೆ.

(ಗೊಂದಲ)

ಶ್ರೀ ವಾಟಾಳ್ ನಾಗರಾಜ್:- ನಿಮ್ಮ ನಿಲುವಿನಿಂದ ರೈತರು ತೊಂದರೆಗೆ ಸಿಕ್ಕುತ್ತಿದ್ದಾರೆ.

ಶ್ರೀ ಎಂ.ವೀರಪ್ಪ ಮೊಯಿಲಿ:- ಮಾನ್ಯ ಮುಖ್ಯಮಂತ್ರಿಗಳು ಈಗಾಗಲೇ ಆಶ್ವಾಸನೆಯನ್ನು ಕೊಟ್ಟಿದ್ದಾರೆ. ನಮ್ಮ ಆದೇಶವನ್ನು ಮೀರಿ ಕೆಲವು ಕಡೆ ವಸೂಲಾತಿಯಾಗುತ್ತಿದ್ದರೆ ಅದು ಯಾವ ಕಡೆಯೆಂದು ನಿರ್ದಿಷ್ಟವಾಗಿ ನಮಗೆ ತಿಳಿಸಿ. ಮಾನ್ಯ ಮೂಧುಸ್ವಾಮಿಯವರು ಹೇಳಿದ ಪ್ರಕಾರ ನಿರ್ದಿಷ್ಟವಾಗಿ ಹೇಳಿ.

ಶ್ರೀ ವಾಟಾಳ್ ನಾಗರಾಜ್:- ಮೊದಲು ದಾವಾ ಹಾಕುವುದನ್ನು ನಿಲ್ಲಿಸಿ.

ಶ್ರೀ ಎಂ.ವೀರಪ್ಪ ಮೊಯಿಲಿ:- 10 ಸಾವಿರ ಒಳಗಡೆ ಇರತಕ್ಕ ಸಾಲವನ್ನು ವಸೂಲಿ ಮಾಡಲಿಕ್ಕೆ ದಾವಾ ಹಾಕುತ್ತಿದ್ದರೆ ಅದನ್ನು ನಿಲ್ಲಿಸಬಹುದು. ಅದರ ಬಗ್ಗೆ ನಾವು ಕ್ರಮ ಕೂಡ ತೆಗೆದುಕೊಳ್ಳುತ್ತೇವೆ. ಸಾಲ ಮನ್ನಾ ವಿಚಾರದಲ್ಲಿ ಬಹಳ ನಿರ್ದಿಷ್ಟವಾದ ಆದೇಶವನ್ನು ಕೊಟ್ಟಿರುವುದರಿಂದ ಇದು ಈ ರೀತಿಯಾಗಿದೆ. ಮಾನ್ಯ ಜಾಲಪ್ಪನವರ ಗ್ರಿವೆನ್ಸಸ್ ಬೇರೆ. ಸಹಕಾರ ಸಚಿವರು ಚುನಾವಣಾ ಪ್ರಕ್ರಿಯೆಯಲ್ಲಿ ಹಸ್ತಕ್ಷೇಪ ಮಾಡುತ್ತಾರೆ, ಇಂತರ ಒಂದು ನಿರ್ದಿಷ್ಟ, ಕಾರ್ಯಕ್ರಮಕ್ಕೆ ಕೈಹಾಕಿದರೆ ದಯವಿಟ್ಟು ಕೇಳಿ. ಅದಕ್ಕೆ ಕಾರಣ ಏನು ಮತ್ತು ಅದು ಸಾಧಾರಣವಾಗಿದೆ, ಅಥವಾ ಕಾರಣ ಇಲ್ಲದೆ, ಯಾವುದೇ ನ್ಯಾಯವಿಲ್ಲದೆ ಮಾಡಿದ್ದಾರೋ ಎಂದು ವಿಚಾರಗಳನ್ನು ಚರ್ಚೆ ಮಾಡಲಿಕ್ಕೆ ಸಾಧ್ಯವಾಗುತ್ತದೆ. ಆದರೆ ತಾವು ಜನರಲ್ ಆಗಿ ಸಹಕಾರ ಚುನಾವಣೆಯಲ್ಲೇ ಕೈಹಾಕುತ್ತಿದ್ದಾರೆ ಎಂದು ಹೇಳಿದರೆ blind allegations ಆಗುತ್ತದೆ.

ಶ್ರೀ ಆರ್.ಎಲ್.ಜಾಲಪ್ಪ:- ನಮಗೆ ದುರ್ದೈವದಿಂದ ಹೇಳುವುದಕ್ಕೆ ಆಗಲಿಲ್ಲ. ಸಹಕಾರ ಇಲಾಖೆ ಬಗ್ಗೆ ಮಾತನಾಡುವುದಕ್ಕೆ ಆಗಲಿಲ್ಲ. ಇಲ್ಲಿ ಹೆಚ್ಚಿಗೆ ಮಾತನಾಡುವುದಕ್ಕೆ ಅವಕಾಶ ಇಲ್ಲ. ಅದನ್ನು ನಾವು ಪ್ರೆಸ್ ಕಾನ್ಫರೆನ್ಸ್ ಮಾಡಿದಾಗ ಏನೇನು ಮಾಡಿದ್ದೀರಿ ಎಂದು ಹೇಳುತ್ತೇವೆ.

ಉಪಾಧ್ಯಕ್ಷರು:- ಯಾವುದಾದರೂ ನಿರ್ದಿಷ್ಟ ಪ್ರಕರಣ ಇದ್ದರೆ ಸರ್ಕಾರದ ಗಮನಕ್ಕೆ ತೆಗೆದುಕೊಂಡು ಬನ್ನಿ.

ಶ್ರೀ ಎಂ.ವೀರಪ್ಪ ಮೊಯಿಲಿ :- ಅದನ್ನು ಹೇಳುವುದು ಬಿಡುವುದು ತಮಗೆ ಸೇರಿದ್ದು. ಆದರೆ ಜನರಲ್ ಆಗಿ ಕಾಮೆಂಟ್ ಮಾಡಿದರೆ ಏನು ಅರ್ಥವಾಗುತ್ತದೆ ಎಂದರೆ ಸಹಕಾರ ಚುನಾವಣೆಯಲ್ಲಿ ನಾವು ಹಸ್ತಕ್ಷೇಪ ಮಾಡುತ್ತಿದ್ದೇವೆ ಎಂದು ಅರ್ಥವಾಗುತ್ತದೆ. ಆದ್ದರಿಂದ ಮಾನ್ಯ ಅಧ್ಯಕ್ಷರೇ . . . .

ಶ್ರೀ ವಾಟಾಳ್ ನಾಗರಾಜ್:- ದಾವೆ ಹಾಕುವುದಿಲ್ಲ ಎಂದು ಒಂದು ಆದೇಶ ಹೊರಟು ಬಿಡಲಿ. ಇದರಿಂದ ಅನುಕೂಲವಾಗುತ್ತದೆ.

ಶ್ರೀ ಎಂ.ವೀರಪ್ಪ ಮೊಯಿಲಿ:- ಮಾನ್ಯ ಮುಖ್ಯಮಂತ್ರಿಗಳು ಈ ಬಗ್ಗೆ ಏನು ಆಶ್ವಾಸನೆ ಕೊಟ್ಟಿದ್ದಾರೆ, ಅದನ್ನು ಕಟ್ಟುನಿಟ್ಟಾಗಿ ಪಾಲಿಸುತ್ತೇವೆ ಎಂದು ನಾನು ಪುನರುಚ್ಚಾರ ಮಾಡುತ್ತೇನೆ.

(ಗೊಂದಲ)

(2) ಹಾಸನದಲ್ಲಿ ಕುಡಿಯುವ ನೀರಿನ ಅಭಾವ .

+ ಶ್ರೀ ಕೆ.ಎಚ್.ಹನುಮೇಗೌಡ:- ನಾನು ಇಪ್ಪತ್ತು ದಿವಸಗಳ ಹಿಂದೆ ಒಂದು ಗಮನ ಸೆಳೆಯುವ ಸೂಚನೆ ಕೊಟ್ಟಿದ್ದೆ. ಹಾಸನದಲ್ಲಿ ಕುಡಿಯುವ ನೀರು ಇಲ್ಲದೆ ಬಹಳ ತೊಂದರೆಯಾಗಿದೆ. ಏಳೆಂಟು ದಿವಸಗಳಿಂದ ಕೆಲವು ನಲ್ಲಿಗಳಲ್ಲಿ ಒಂದು ಹನಿ ನೀರು ಬಂದಿಲ್ಲ. ಮೊನ್ನೆ ನಾನು ಊರಿಗೆ ಹೋಗಿದ್ದೆ. ನೀರು ಸ್ವಚ್ಛ ಇಲ್ಲದೆಯೋ ಏನೋ ಅಥವಾ ಏನು ತಿಂದರೋ ಏನೋ ನೂರಾರು ಜನರಿಗೆ ವಾಂತಿ, ಭೇದಿಯಾಗಿ ಬಡ ಜನತೆ ಆಸ್ಪತ್ರೆಗೆ ಅಡ್ಮಿಟ್ ಆಗಿದ್ದಾರೆ. ಯಾವ ಆಸ್ಪತ್ರೆಯಲ್ಲೂ ಜಾಗ ಇಲ್ಲ. ಈ ವಿಚಾರವನ್ನು ಯಾರ ಗಮನಕ್ಕೆ ತಂದರೂ ಅವರು ಗಮನಹರಿಸುತ್ತಿಲ್ಲ. ಮಾನ್ಯ ಸಚಿವರು ಇದರ ಬಗ್ಗೆ ಗಮನಹರಿಸಿ ಸೂಕ್ತ ಕಾರ್ಯಕ್ರಮ ತೆಗೆದುಕೊಂಡು

ಒಳ್ಳೆಯ ನೀರು ಒದಗಿಸುವುದಕ್ಕೆ ವ್ಯವಸ್ಥೆ ಮಾಡುತ್ತೀರಾ ? ಮತ್ತು ಕಾಯಿಲೆಗೆ ಒಳಗಾಗಿ ವಾಂತಿಭೇದಿ, ಜ್ವರದಿಂದ ಮಲಗಿಬಿಟ್ಟಿದ್ದಾರೆ, ಆ ಜನರನ್ನು ಟ್ರೀಟ್ ಮಾಡುವುದಕ್ಕೆ ಏನು ಕಾರ್ಯಕ್ರಮ ತೆಗೆದುಕೊಳ್ಳುತ್ತೀರಿ ಎನ್ನುವುದರ ಬಗ್ಗೆ ವಿವರ ಕೊಡಬೇಕು.

ಶ್ರೀಮತಿ ಮೋಟಮ್ಮ :-ಕುಡಿಯುವ ನೀರಿನ ಸಮಸ್ಯೆ ಬಗ್ಗೆ ನಾನು ಸಹ ಗಮನ ಸೆಳೆಯುವ ಸೂಚನೆ ಕಳುಹಿಸಿದ್ದೆ.

ಉಪಾಧ್ಯಕ್ಷರು:- ಅವರು ಹಾಸನದ್ದು ಹೇಳುತ್ತಿದ್ದಾರೆ. ನೀವು ಬೇರೆ ಹೇಳುತ್ತಿದ್ದೀರಿ.

ಶ್ರೀ ಕೆ.ಹೆಚ್.ಹನುಮೇಗೌಡ:- ಬಹಳ ತೊಂದರೆಯಾಗಿದೆ. ನೂರು ಜನ ಮಲಗಿಬಿಟ್ಟಿದ್ದಾರೆ.

ಉಪಾಧ್ಯಕ್ಷರು:- ನೀವು ಹೇಳಿದ್ದೀರಿ. ಮಂತ್ರಿಗಳು ಏನು ಹೇಳುತ್ತಾರೋ ನೋಡೋಣ.

ಶ್ರೀ ಕೆ.ಹೆಚ್.ಹನುಮೇಗೌಡ:- ಅವರು ಆಗಬಹುದು ಎಂದು ಹೇಳುತ್ತಾರೆ. ಸಂಬಂಧಪಟ್ಟ ಮಂತ್ರಿಗಳು ಹೇಳಬೇಕು. ಅವರು ಏನಾದರೂ ಕಾರ್ಯಕ್ರಮ ತೆಗೆದುಕೊಳ್ಳಬೇಕು.

ಶ್ರೀ ಎಂ.ವೀರಪ್ಪ ಮೊಯಿಲಿ:-ಮಾನ್ಯ ಹನುಮೇಗೌಡರಿಗೆ ಸಂಬಂಧಪಟ್ಟ ಮಂತ್ರಿಗಳು ಉತ್ತರ ಕೊಡಬೇಕು. ಅವರ ಬಗ್ಗೆ ಬಹಳ ಮಮಕಾರ ಇದೆ. ನಮ್ಮ ಬಗ್ಗೆ ಮಮಕಾರ ಇಲ್ಲ. ತಮಗೆ ಇವತ್ತು ಸಂಜೆ ಒಳಗಡೆ ಅಲ್ಲಿ ಪರಿಸ್ಥಿತಿ ಏನಿದೆ ಮತ್ತು ಏನು ಪರಿಹಾರ ಕ್ರಮ ತೆಗೆದುಕೊಳ್ಳುತ್ತೇವೆ ಎಂದು ವಿವರವಾದ ವರದಿಯನ್ನು ಕೊಡುತ್ತೇವೆ.

ಪ್ರಕಟಣೆ

ಉಪಾಧ್ಯಕ್ಷರು:-ವಿಧಾನಸಭಾ ಸದಸ್ಯರಾದ ಶ್ರೀ ವಾಟಾಳ್ ನಾಗರಾಜ್ ಹಾಗೂ ಶ್ರೀ ಸಿ.ಬೈರೇಗೌಡರನ್ನು ದಿನಾಂಕ 26ನೇ ಮಾರ್ಚ್ 92 ರಂದು ಸಮಯ ಮಧ್ಯಾಹ್ನ 12-15 ಗಂಟೆಯಲ್ಲಿ ವಿಧಾನಸೌಧದ ಪಶ್ಚಿಮ ದ್ವಾರದ ಮುಂದೆ ಬಂಧಿಸಿ ಅದೇ ದಿನ ಮಧ್ಯಾಹ್ನ 1 ಗಂಟೆಗೆ ಬಿಡುಗಡೆ ಮಾಡಲಾಯಿತು - ಎಂದು ಸಬ್ ಇನ್‌ಸ್ಪೆಕ್ಟರ್ ಆಫ್ ಪೋಲೀಸ್, ವಿಧಾನಸೌಧ ಠಾಣೆ, ಬೆಂಗಳೂರು, ಇವರಿಂದ ನಮಗೆ ಸಂದೇಶ ಬಂದಿರುತ್ತದೆ. ಈಗ ಸಭೆಯನ್ನು ಮುಂದೂಡಿ ಪುನಃ ಎರಡೂವರೆ ಗಂಟೆಗೆ ಸಮಾವೇಶಗೊಳ್ಳುತ್ತದೆ.

(ಸದನವು ಮಧ್ಯಾಹ್ನ 2.40 ಗಂಟೆಗೆ ಪುನಃ ಸಮಾವೇಶಗೊಂಡಿತು. ಮಾನ್ಯ ಉಪಾಧ್ಯಕ್ಷೆಯವರು ಅಧ್ಯಕ್ಷ ಪೀಠವನ್ನಲಂಕರಿಸಿದರು)

ನಿಯಮ 334 ರ ಮೇರೆಗೆ

ವಿಷಯ : (1) ಹಾಸನ ಕ್ಷೇತ್ರದ ಕಟ್ಟಾಯ ಹೋಬಳಿ ಶಂಕರನಹಳ್ಳಿಯ ಹತ್ತಿರ ಯಗಚಿ ನದಿಗೆ ಏತ ನೀರಾವರಿ ಯೋಜನೆಯನ್ನು ಕಾರ್ಯಗತ ಮಾಡುವ ಬಗ್ಗೆ.

ಶ್ರೀ ಕೆ.ಹೆಚ್.ಹನುಮೇಗೌಡ:- (ಹಾಸನ):-ಸನ್ಮಾನ್ಯ ಉಪಾಧ್ಯಕ್ಷಿಣಿಯರೆ, ಹಾಸನ ಕ್ಷೇತ್ರದ ಕಟ್ಟಾಯ ಹೋಬಳಿ ಶಂಕರನಹಳ್ಳಿಯ ಹತ್ತಿರ ಯಗಚಿ ನದಿಗೆ ಆಗಾಗ್ಗೆ ಬರಗಾಲಕ್ಕೆ ತುತ್ತಾಗುವ ಪ್ರದೇಶಕ್ಕೆ ನೀರೊದಗಿಸಲು 1980ನೇ ಇಸವಿಯಲ್ಲಿ ಒಂದು ಏತ ನೀರಾವರಿ ಯೋಜನೆಯನ್ನು ಕಾರ್ಯಗತಮಾಡಲು ರಾಜ್ಯದ ಬಜೆಟ್‌ಗೆ ಸೇರಿಸಲಾಯಿತು. ಆದರೆ ಈ ಯೋಜನೆಯು ಇನ್ನೂ ಕಾರ್ಯಗತವಾಗಲಿಲ್ಲ. 1990ನೇ ಇಸವಿಯಲ್ಲಿ ಈ ಯೋಜನೆಯನ್ನು ಕಾರ್ಯಗತವಾಡಲು ಟೆಂಡರ್ ಕರೆಯಲಾಯಿತು. ಆದರೆ ಇದುವರೆಗೂ ಈ ಯೋಜನೆ ಕಾರ್ಯಗತ ಮಾಡದಿರುವ ಬಗ್ಗೆ ಮಾನ್ಯ ಸಣ್ಣ ನೀರಾವರಿ ಇಲಾಖೆಯ ರಾಜ್ಯ ಸಚಿವರನ್ನು ಒತ್ತಾಯಿಸುತ್ತೇನೆ.

ಶ್ರೀ ಮಲ್ಲಾರಿಗೌಡ ಎಸ್.ಪಾಟೀಲ್:- ಮಾನ್ಯ ಉಪಾಧ್ಯಕ್ಷಿಣಿಯವರೆ, ಮಾನ್ಯ ಸದಸ್ಯರಾದ ಹನುಮೇಗೌಡರು ಹೇಳಿದಂಥ ವಿಚಾರವನ್ನು ಮಾನ್ಯ ಸಣ್ಣ ನೀರಾವರಿ ಯೋಜನಾ ಮಂತ್ರಿಗಳ ಗಮನಕ್ಕೆ ತಂದು ಮುಂದಿನ ಕ್ರಮ ತೆಗೆದುಕೊಳ್ಳುವಂತೆ ಸೂಚಿಸುತ್ತೇನೆ.